ಆ) ಸರ್ಕಾರದ ನೀತಿಯಂತೆ ೧೯೭೮ರ ಪೂರ್ವದಲ್ಲಾದ ಅತಿಕ್ರಮಣಗಳನ್ನು ಒಕ್ಕಲೆಬ್ಬಿಸಲಾಗುತ್ತಿಲ್ಲ.

ಇ) ಅರಣ್ಯ ಸಂರಕ್ಷಣಾ ಅಧಿನಿಯಮ ೧೯೮೦ರ ಮೇರೆಗೆ ಕೇಂದ್ರ ಸರ್ಕಾರದ ಪೂರ್ವಾನುಮತಿ ದೊರತ ನಂತರ ಕ್ರಮ ಕೈಗೊಳ್ಳಲಾಗುವುದು.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಅರಣ್ಯ ಪ್ರದೇಶದ ಅತಿಕ್ರಮಣತೆಗೆ ತಾಲ್ಲೂಕುಮಟ್ಟದ ಸಮಿತಿಗಳು

೩೪೩ (೭೧೪) ಶ್ರೀ ಯು. ಭೂಪತಿ (ಸಂಡೂರು). ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಅರಣ್ಯ ಪ್ರದೇಶದಲ್ಲಾದ ಅತಿಕ್ರಮಣಗಳನ್ನು ಗುರ್ತಿಸಲು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಎಫ್‌ಡಿ ೨೩೧ ಎಫ್‌ಜಿಎಲ್ ೮೩, ದಿನಾಂಕ ೭.೩.೮೭ರಲ್ಲಿ ರಚಿಸಲಾದ ತಾಲ್ಲೂಕುಮಟ್ಟದ ಸಮಿತಿಗಳು ಕಾರ್ಯ ನಿರ್ವಹಿಸುತ್ತಿವೆಯೇ ?

ಆ) ಹಾಗಿದ್ದಲ್ಲಿ ಕಾರಣಗಳನ್ನು ಕೊಡಿ.

ಶ್ರೀ ಬಿ. ರಾಚಯ್ಯ, (ಕೃಷಿ ಮತ್ತು ಅರಣ್ಯ ಮಂತ್ರಿಗಳು).—

ಅ) ಈ ಆದೇಶದನ್ವಯ ಈಗಾಗಲೇ ರಾಜ್ಯದ ೪ ಜಿಲ್ಲೆಗಳಲ್ಲಿ (ಕೊಡಗು, ಕೋಲಾರ, ಉತ್ತರ ಕನ್ನಡ ದಕ್ಷಿಣ ಕನ್ನಡ) ಸಮಿತಿ ರಚನೆ ಮಾಡಿ ಕಾರ್ಯ ನಿರ್ವಹಿಸುತ್ತಿವೆ. ಸದ್ಯದಲ್ಲೇ ಬೇರೆ ಜಿಲ್ಲೆಗಳಲ್ಲಿ ಸಮಿತಿ ನೇಮಕಾತಿ ಮಾಡಲಾಗುವುದು.

ಆ) ಬಾಕಿ ಜಿಲ್ಲೆಗಳಲ್ಲಿ ಸಮಿತಿ ನೇಮಕಾತಿ ಮಾಡಲು ಅಧಿಕಾರೇತರ ಸದಸ್ಯರ ಬಗ್ಗೆ ಮಾಹಿತಿ ಪಡೆಯಲಾಗುತ್ತಿದೆ.

ಸೂರತ್ಕಲ್‌ನ ರೀಜನಲ್ ಇಂಜಿನೀಯರಿಂಗ್ ಕಾಲೇಜಿನಲ್ಲಿ ಪ್ರವೇಶಗಳನ್ನು ಕಾಯ್ದಿರಿಸಂವ ಬಗ್ಗೆ.

೩೪೪ (೭೧೧) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ;—

ಅ) ಕೇಂದ್ರ ಸರ್ಕಾರದ ಯೋಜನೆಯಂತೆ, ರಾಜ್ಯ ಸರ್ಕಾರವು, ಸೂರತ್‌ಕಲ್‌ನ ರೀಜನಲ್ ಇಂಜಿನೀಯರಿಂಗ್ ಕಾಲೇಜಿನ ಎಲ್ಲಾ ವಿಭಾಗಗಳಲ್ಲಿಯೂ ಶೇಕಡ ೨೫ರಷ್ಟು ಪ್ರವೇಶಗಳನ್ನು ಕಾಯ್ದಿರಿಸಲು, ರಾಜ್ಯ ಸರ್ಕಾರ ಉದ್ದೇಶಿಸಿದೆಯೇ ?

ಆ) ರಾಜ್ಯ ಸರ್ಕಾರವು, ಎಲ್ಲಾ ಪ್ರವೇಶಗಳನ್ನು, ಕರ್ನಾಟಕದ ವಿದ್ಯಾರ್ಥಿಗಳಿಗೆ ಮೀಸಲಿಡಲು ಯೋಚಿಸುತ್ತಿದೆಯೇ ?

ಇ) ಹಾಗಿದ್ದಲ್ಲಿ, ಈ ದಿಶೆಯಲ್ಲಿ ತೆಗೆದುಕೊಂಡಿರುವ ಕ್ರಮದ ಬಗ್ಗೆ ?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ಶಿಕ್ಷಣ ಸಚಿವರು).—

ಅ) ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅನ್ವಯಿಸುವ ಕೇಂದ್ರ ಸರ್ಕಾರದ ನೀತಿಯನ್ನು ಪಾಲಿಸಲಾಗುತ್ತಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.